# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶಿವಮೊಗ್ಗ ಮತ್ತು ಕಲಬುರಗಿ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ವೆಚ್ಚಕ್ಕಾಗಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಕಡತ ಸಂಖ್ಯೆ: ಆಇ 65 ವೆಚ್ಚ 1/2016 ಹಾಗೂ ಆಇ 69 ವೆಚ್ಚ 1/2016

**ಪ್ರಸ್ತಾವನೆ:**

ಶಿವಮೊಗ್ಗ ಮತ್ತು ಕಲಬುರಗಿ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧಿಕಾರಿ/ಸಿಬ್ಬಂದಿಯವರ ವೇತನ ವೆಚ್ಚಕ್ಕಾಗಿ ಪ್ರಧಾನ ಲೆಕ್ಕ ಶೀರ್ಷಿಕೆ 2851 ಮತ್ತು 2852 (ಯೋಜನೇತರ) ಕಾರ್ಯಕ್ರಮಗಳಡಿ ಅನುಕ್ರಮವಾಗಿ ಒಟ್ಟು ರೂ.13.68ಲಕ್ಷ ಅನುದಾನವನ್ನು ಲೆಕ್ಕ ಶೀರ್ಷಿಕೆ 2515-300(ಯೋಜನೇತರ) ಅಡಿ ಲಭ್ಯವಿರುವ ಅನುದಾನದಿಂದ ಬಿಡುಗಡೆಗೊಳಿಸುವಂತೆ ಮೇಲೆ (2)ರಲ್ಲಿ ಓದಲಾದ ಆರ್ಥಿಕ ಇಲಾಖೆ, ವೆಚ್ಚ 1ರ ಕಡತಗಳಲ್ಲಿ ಆದೇಶಿಸಿದೆ. 2015-16ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2515-00-196-1-05-300 (ಯೋಜನೇತರ)ಅಡಿ ತೆರವಾದ ಹುದ್ದೆಗಳಿಗೆ ಕಾರ್ಯಕ್ರಮದಡಿ ರೂ.7500.00ಲಕ್ಷಗಳ ಅನುದಾನದಲ್ಲಿ ಲಭ್ಯವಿರುವ ಅನುದಾನದಿಂದ ರೂ.13.68ಲಕ್ಷಗಳನ್ನು ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 55 ವೆಚ್ಚ 6/2016 ದಿನಾಂಕ:15ನೇ ಫೆಬ್ರವರಿ 2016

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕೆಳಕಂಡ ಅನುಬಂಧದ ಕಾಲಂ 2ರ ಜಿಲ್ಲಾ ಪಂಚಾಯತ್‌ಗಳಿಗೆ ಕಾಲಂ 1ರ ಕಡತಗಳಲ್ಲಿನ ಪ್ರಸ್ತಾವನೆಯಂತೆ ಕಾಲಂ 3 ಕಾರ್ಯಕ್ರಮಗಳಡಿಯ ವೆಚ್ಚಗಳಿಗಾಗಿ ಕಾಲಂ 4ರ ಲೆಕ್ಕ ಶೀರ್ಷಿಕೆಯಡಿ ಒಟ್ಟು ರೂ.13.68ಲಕ್ಷ (ರೂಪಾಯಿ ಹದಿಮೂರು ಲಕ್ಷದ ಅರವತ್ತೆಂಟು ಸಾವಿರಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಲಾಗಿದೆ. ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಮೇಲೆ (1)ರಲ್ಲಿ ಓದಲಾದ ಸುತ್ತೋಲೆಯಲ್ಲಿ ನೀಡಿದ ನಿರ್ದೇಶನದಂತೆ ಕ್ರಮವಹಿಸಿ ವೇತನ/ವೇತನೇತರ ಬಿಲ್ಲುಗಳ ತೀರುವಳಿಗೆ ಕ್ರಮವಹಿಸತಕ್ಕದ್ದು. ಪ್ರಸ್ತುತ ಪ್ರಕರಣಕ್ಕೆ ಆರ್ಥಿಕ ಇಲಾಖೆ ಮರುಹೊಂದಾಣಿಕೆಗೆ ಸಹಮತಿಸಿದೆ ಎಂದು ಭಾವಿಸತಕ್ಕದ್ದು.

| ಶಾಖೆಯ ಕಡತ ಸಂಖ್ಯೆ | ಜಿಲ್ಲಾ ಪಂಚಾಯತ್ | ವೇತನಕ್ಕಾಗಿ ಮರುಹೊಂದಾಣಿಕೆಗೊಳಿಸಬೇಕಾದ ಯೋಜನೇತರ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | 2515-00-196-1-05-300 (ಯೋಜನೇತರ) ಅಡಿ ಬಿಡುಗಡೆಗೊಳಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2 | 3 | 4 |
| ಆಇ 65 ವೆಚ್ಚ1/2016 | ಕಲಬುರಗಿ | 2852-00-107-0-29-001(ಯೋಜನೇತರ) | 8.66 |
| ಆಇ 69 ವೆಚ್ಚ 1/2016 | ಶಿವಮೊಗ್ಗ | 2851-00-107-0-29-001(ಯೋಜನೇತರ) | 5.02 |
| | | ಒಟ್ಟು | **13.68** |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಮುರಳೀಧರ 15-2-16

**(ಕೆ. ಮುರಳೀಧರ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ವೆಚ್ಚ 5)

1. ಮಹಾಲೇಖಪಾಲರು (ಎ&ಇ), ಲೆಕ್ಕ ಪರಿಶೋಧನೆ 1&2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ವಾಣಿಜ್ಯ & ಕೈಗಾರಿಕೆ ಇಲಾಖೆ
3. ಕಾಲಂ 2ರ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು,
4. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಕಾಲಂ 2 ಜಿಲ್ಲೆಗಳ ಜಿಲ್ಲಾ ಖಜಾನೆ ಅಧಿಕಾರಿಗಳು
6. ಆರ್ಥಿಕ ಇಲಾಖೆ, ವೆಚ್ಚ 1ರ ಶಾಖೆಯ ಕಡತಗಳಿಗೆ
7. ರಕ್ಷಾ ಕಡತಕ್ಕೆ
8. ಹೆಚ್ಚುವರಿ ಪ್ರತಿ